**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಓಎಸ್ 329/2019</u>**

ಪಿ  ಡಬ್ಲ್ಯೂ-1

**<u>ದಿನಾಂಕ 29-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ  ಕೆ ಬಿ ಜಿ 1 ನೇ ಪ್ರತಿವಾದಿ ಪರ ವಕೀಲರುಃ</u>**

ನಾನು 7 ನೇ ತರಗತಿಯವರೆಗೆ ಓದಿದ್ದೇನೆ.  ನಾನು ಈ ದಾವೆಯನ್ನು ಪ್ರತಿವಾದಿಗಳು ನಮ್ಮ ಜಾಗದಲ್ಲಿ ಮನೆಯನ್ನು ನಿರ್ಮಾಣ ಮಾಡುವುದನ್ನು ತಡೆಯಲು ಸಲ್ಲಿಸಿದ್ದೇನೆ. ನಾನು ಸಲ್ಲಿಸಿರುವ  ನಿಪಿ 1 ಕ್ರಯ ಪತ್ರದಲ್ಲಿ ಅಸೆಸ್ಮೆಂಟ್ ನಂ. 9 ಖಾತಾ ನಂ 127 ಎಂದರೆ ಸಾಕ್ಷಿ ಖಾತಾ ನಂ. 12 ಎಂದು ತಿಳಿಸಿರುತ್ತಾರೆ. ಖಾತೆ ನಂ 12  ನಮಗೆ ಸೇರಿದೆ ಎಂದು ತೋರಿಸಲು ಯಾವುದೇ ಪಂಚಾಯಿತಿ ದಾಖಲೆಗಳನ್ನು ಹಾಜರು ಪಡಿಸಿಲ್ಲ.

2. ನಾನು ಹೊಸಅಗ್ರಹಾರ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಖಾತೆ ನಂಬರ 9/11  ನ್ನು ನಮ್ಮ ಹೆಸರಿಗೆ ಕೊಡುವ ಕುರಿತಾಗಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯಲ್ಲಿ ಖಾತೆ ಸಂಖ್ಯೆ 61 ಅಸೆಸ್ಮೆಂಟ 51 ರಲ್ಲಿ  30 X 30 ನಾಡ ಹಂಚಿನ ಮನೆ ಮತ್ತು ಅವರ ಜೊತೆಗೆ ಇರುವ ನಿವೇಶನಕ್ಕೆ ಸಂಬಂಧಿಸಿದಂತೆ 9/11 ಅಸೆಸ್ಮೆಂಟ್ ನ್ನು ಕೊಡಲು ಅರ್ಜಿ ಸಲ್ಲಿಸಿದ್ದು ಸದರಿ  2 ನೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳು ನಮ್ಮ ತಂದೆಯ ಹೆಸರಿನಲ್ಲಿ ಇದ್ದವು ಅವುಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

3. ಖಾಲಿ ನಿವೇಶನಕ್ಕೆ ಸೇರಿದ ಯಾವುದೇ ದಾಖಲೆಗಳು ಇರುವುದಿಲ್ಲ ಆದರೆ ನನ್ನ ಸ್ವಾಧೀನದಲ್ಲಿ ಇರುತ್ತದೆ.  ನಿಪಿ 6 ರಲ್ಲಿ ಅರ್ಜಿ ನೀಡಿದ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ಅಸೆಸ್ಮೆಂಟ್ ನ್ನು ಪಡೆದುಕೊಳ್ಳಲು ಅರ್ಜಿಯನ್ನು ನೀಡಬೇಕಾದರೆ ಸದರಿ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳು ನಮ್ಮ ಹೆಸರಿನಲ್ಲಿ ಇರಬೇಕು ಎಂದರೆ ಸರಿ ಸಾಕ್ಷಿ ಮುಂದುವರೆದು ಪತ್ರ ಇತ್ತು ಎಂದು ತಿಳಿಸಿರುತ್ತಾರೆ.

4. 1ನೆ ಪ್ರತಿವಾದಿ ಲಕ್ಷಮ್ಮರವರ ಗಂಡ ಪುಟ್ಟೆಗೌಡರು ದಿಃ 25-06-1966 ರಂದು ಸಿದ್ದೇಗೌಡರ ಮಗ ನಿಂಗೇಗೌಡರವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವು ನೋಂದಾವಣಿಯಾಗಿದ್ದು ಈ ದಿನ ಸದರಿ ಕ್ರಯ ಪತ್ರ ನ್ಯಾಯಾಲಯದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

5. 1ನೆ ಪ್ರತಿವಾದಿ ಲಕ್ಷಮ್ಮರವರ ಗಂಡ ಪುಟ್ಟೆಗೌಡರು ದಿಃ 26-03-1981 ರಂದು ಬಸವೇಗೌಡರ ಮಗ ರಾಜೇಗೌಡರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಬೇರೆ ನಿವೇಶನವನ್ನು ಖರೀದಿ ಮಾಡಿರುತ್ತಾರೆ. ದಾವಾ ಷೆಡ್ಯೂಲ್ ಎ ಸ್ವತ್ತನ್ನು ಪುಟ್ಟೇಗೌಡ ರಾಜೇಗೌಡರ ಕಡೆಯಿಂದ ಖರೀದಿ ಮಾಡಿರುತ್ತಾರೇ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ರಾಜೇಗೌಡರು ದಿಃ 03-03-1980 ರಂದು ಶಿವೇಗೌಡರ ಕಡೆಯಿಂದ ನೋಂದಾಯಿತಿ ಕ್ರಯ ಪತ್ರದ ಮುಖಾಂತರ ಖರೀದಿ ಮಾಡಿರುತ್ತಾರೇ ಎಂದರೆ ಸರಿಯಲ್ಲ.

6. ನಮ್ಮ ಹೆಸರಿನಲ್ಲಿ ಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ಆದರೆ ಸ್ವಾಧೀನದಲ್ಲಿ ನಾವು ಇದ್ದೇವೆ. ಪಂಚಾಯಿತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಇರುವುದಿಲ್ಲ. ದಾವಾ ಬಿ ಷೆಡ್ಯೂಲ್ ಸ್ವತ್ತು 1 ನೇ ಪ್ರತಿವಾದಿಯ ಗಂಡ ಪುಟ್ಟೇಗೌಡರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

7. ದಾವಾ ಬಿ ಷೆಡ್ಯುಯಾಲ್ ಸ್ವತ್ತಿನಲ್ಲಿ ಮನೆಯನ್ನು ನಿರ್ಮಾಣ ಮಾಡಲು 1ನೇ ಪ್ರತಿವಾದಿಯ ಗಂಡ ಪರವಾನಿಗೆಯನ್ನು ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾಲಿ ನಿವೇಶದನ ಜಂಜರ ಸಂಖ್ಯೆ 60 ಹಾಗೂ ಸ್ವತ್ತಿನ ಸಂಖ್ಯೆ 59/1 ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ಅದೇ ಬೇರ ನಂಬರ ಎಂದು ತಿಳಿಸಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ಬೇರೆ ಜಾಗದ ದಾಖಲೆಗಳು ಎಂದು ತಿಳಿಸಿರುತ್ತಾರೆ.

8. ದಾವಾ ಬಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲೆಗಳನ್ನು ಪ್ರತಿವಾದಿಗಳು ಪಾವತಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಬೇರೆ ಸ್ವತ್ತಿನ ದಾಖಲೆಗಳು ಇರಬಹುದು ಎಂದು ತಿಳಿಸಿರುತ್ತಾರೆ. 1 ನೇ ಪ್ರತಿವಾದಿ 9/11 ಅಸೆಸ್ಮೆಂಟ್ ನ್ನು ಪಡೆಯಲು ಅರ್ಜಿ ಸಲ್ಲಿಸಿದ ಸಮಯದಲ್ಲಿ ನಾನು ಸದರಿ ಅರ್ಜಿಗೆ ತಕರಾರನ್ನು ನೀಡಿದ್ದು ಆ ಸಮಯದಲ್ಲಿ ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಸ್ಥಳದ ಪರೀಶಿಲನೆಯನ್ನು ಮಾಡಿರುತ್ತಾರೆ ಎಂದರೆ ಸರಿ.

9. ನಂತರ ಸ್ಥಳ ಪರೀಶಿಲನೆ ಮಾಡಿ ಸದರಿ ದಾವಾ ಬಿ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಲಕ್ಷ್ಮಮ್ಮ ರವರೆ ಸ್ವಾಧೀನಾನುಭವದಲ್ಲಿದ್ದಾರೆ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪಂಚಾಯಿತಿ ವತಿಯಿಂದ ವಕೀಲರ ಕಾನೂನು ಸಲಹೆಯನ್ನು ಪಡೆದು ಸದರಿ ಷೆಡ್ಯೂಲ್ ಬಿ ಸ್ವತ್ತು ಪ್ರತಿವಾದಿಗೆ ಸೇರಿದೆ ಎಂದು ವರದಿಯನ್ನು ನೀಡಿರುತ್ತಾರೆ ಎಂದರೆ ನಮಗೆ ತಿಳಿಸಿಲ್ಲ.

10. ಪಂಚಾಯಿತಿಯವರು ಪರೀಶಿಲನೆ ಮಾಡಿ ನ್ಯಾಯಾಲಯಕ್ಕೆ ಹೋಗಿ ತೀರ್ಮಾಣ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ. ಸದರಿ ಪಂಚಾಯಿತಿಯವರು ನ್ಯಾಯಾಲಯಕ್ಕೆ ಹೋಗುವಂತೆ ಬಾಯಿ ಮಾತಿನ ಮುಖಾಂತರ ಹೇಳಿರುತ್ತಾರೆ ಯಾವುದೇ ದಾಖಲೆ ಇರುವುದಿಲ್ಲ. ಪಂಚಾಯಿತಿಯವರು ವರದಿಯನ್ನು ನೀಡಿದ್ದರು ಸಹ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ